| JAIN COLLEGE V V Puram | Course: | II year PUC |
|---|---|---|
| | Subject: | Kannada |
| | Max. Marks: | 80 (ಒಟ್ಟು 52 ಪ್ರಶ್ನೆಗಳು) |
| II PUC Mock Question Paper 2 – JAN-2025 | Duration: | 3 hours |

**ಸೂಚನೆ: ಅ ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು**

## ಅ –ವಿಭಾಗ

**ಅ. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :** **10×1=10**

1. ಸೀತೆ ಯಾವುದನ್ನು ಹುಲ್ಲಿಗೆ ಸಮಾನವೆಂದು ಭಾವಿಸಿದಳು ?
   ಅ .ರಾಕ್ಷಸರ ರಾಜ್ಯವನ್ನು ಆ .ರಾಮ ಲಕ್ಷ್ಮಣರನ್ನು
   ಇ .ರಾವಣನ ರೂಪವನ್ನು ಈ .ಅಂಗದಾದಿಗಳನ್ನು
2. ಗುರು ಹೇಗೆ ವರ್ತಿಸಬಾರದು ?
   ಅ. ಲಘುವಾಗಿ ಆ. ಕೆಟ್ಟದಾಗಿ ಇ. ಸರಿಯಾಗಿ ಈ. ತಪ್ಪಾಗಿ
3. ವಲ್ಲಭೆಯೆ ಬರವೇನು ಮುಖದಲಿ
   ತಲ್ಲಣವೆ ತಲೆದೋರುತಿದೆ ತಳು
   ವಿಲ್ಲದುಸುರಿರುಳೇಕೆ ಬಂದೆ ಲತಾಂಗಿ ಹೇಳೆಂದ –ಹೀಗೆಂದು ದ್ರೌಪದಿಯನ್ನು ಪ್ರಶ್ನಿಸಿದವರು ಯಾರು ?
   ಅ. ಕೀಚಕ ಆ ಅರ್ಜುನ ಇ. ಭೀಮ ಈ. ಯಮಸುತ
4. ಹಲವು ಹಳ್ಳಗಳು ಸೇರಿ ಏನಾಗುತ್ತವೆ ?
   ಅ.ಕೆರೆ ಆ. ನದಿ ಇ. ಸಮುದ್ರ ಈ. ಹೊಳೆ
5. ಜಾಲಿಯ ಮರದಂತಿರುವವರು ಯಾರು?
   ಅ. ಸಜ್ಜನರು ಆ. ಆಚಾರವಂತರು ಇ.ದುರ್ಜನರು ಈ. ಪಂಡಿತರು
6. ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಯಾವುದು ?
   ಅ. ಕೆಂಪು ಪಾಂಡಾ ಆ. ಸಿಂಹಬಾಲದ ಕೋತಿ
   ಇ. ತೋಳ ಈ. ವಿಷಲಿಂಗ್ ಥ್ರಷ್
7. ನಮ್ಮ ಭಾರತದಲ್ಲಿ ಎಷ್ಟು ಜನ ಹೆಣ್ಣು ಮಕ್ಕಳಿಗೆ ಓದೋ ಅವಕಾಶ ಸಿಗುತ್ತೆ ಹೇಳು ,ವಿದ್ಯಾವಂತರ ಕುಟುಂಬದಲ್ಲಿ ಹುಟ್ಟಿದೆನಲ್ಲ ಅದು ನನ್ನ ಅದೃಷ್ಟ --ಇಲ್ಲಿನ ಹೇಳಿಕೆಯಲ್ಲಿ ಕಂಡು ಬರುವ ಅದೃಷ್ಟವಂತೆ ?
   ಅ. ಸೀತಾ ಆ.ಫ್ಲೇವಿಯಾ ಇ. ಕಮಲಾ ಮೇಡಂ ಈ. ಲೇಖಕಿ
8. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು ?
   ಅ. ಮನೆ ರಿಪೇರಿ ಆ. ಸ್ಕೂಟರ್ ರಿಪೇರಿ ಇ. ಜೀಪ್ ರಿಪೇರಿ ಈ. ಕಾರ್ ರಿಪೇರಿ
9. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?
   ಆ. ಆನೆ ವಿಷಯ ಆ. ಕಂತ್ರಿ ನಾಯಿಗಳ ವಿಷಯ
   ಇ. ಜಬ್ಬಾರ್ ವಿಷಯ ಈ. ಕಾಡಾನೆ ವಿಷಯ
10. 'ಅದೇನ್ಮಾಡುತ್ತಯ್ಯಾ ಆನೆ , ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ತೀರಲ್ಲಯ್ಯ . ಬಾಯಿಲ್ಲದೋರು ಈ ಪ್ರಪಂಚದಲ್ಲಿ ಬದುಕೋ ಹಂಗೇ ಇಲ್ವೇನಯ್ಯ?" ಹೀಗೆಂದು ನಿರೂಪಕರು ದುರ್ಗಪ್ಪನಿಗೆ ಹೇಳಿದ ಮಾತಿನಲ್ಲಿ ವ್ಯಕ್ತವಾಗುವ ಭಾವ ----------
    ಅ. ಆನೆ ಗೌರಿಯ ಬಗೆಗೆ ನಿರೂಪಕರಲ್ಲಿರುವ ಸಹಾನುಭೂತಿ ಆ. ದುರ್ಗಪ್ಪನ ಬಗೆಗೆ ಕೋಪ
    ಇ. ವಿದ್ಯುತ್ ಇಲಾಖೆಯ ಬಗ್ಗೆ ಅಸಹನೆ ಈ. ಬಾಯಿ ಇರುವವರ ಬಗ್ಗೆ ಅಸಮಧಾನ

**ಆ. ಬಿಟ್ಟ ಸ್ಥಳಗಳಿಗೆ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ :** **5×1=5**

[ಭಾಷೆಯನ್ನು , ಕಾರ್ವರ್ ಮಾರ್ಷ್ , ವಾತ್ಸ್ಯಾಯನ, ಒಕ್ಕಲುಮಕ್ಕಳನ್ನು, ಹಳ್ಳಿಯ ಚಹಾ ಹೋಟೇಲ್ನಲ್ಲಿ , ಪಟ್ಟಣದ ಹೋಟೇಲ್ನಲ್ಲಿ ]

11. ವಾಲ್ಪರೈಗೆ ಬಂದ ಬ್ರಿಟಿಷ್ ಪ್ರಜೆ --------------
12. ಬದುಕು -----------ಬಿಟ್ಟು ಇರುವುದಿಲ್ಲ
13. ಧಣಿ ಎಂದಿಗೂ -------------ನಂಬುವುದಿಲ್ಲ
14. ಶೇಷನು ರಾಮಾಯಣದ ಕಥೆಯನ್ನು ------------ಗೆ ಹೇಳಿದನು
15. ಮೂರು ಕಾಲಿನ ಕುರ್ಚಿ ----------------ಇದೆ

**16. ಹೊಂದಿಸಿ ಬರೆಯಿರಿ :-** **5×1=5**

| | |
|---|---|
| 1. ರೂಪಕ ಸಾಮ್ರಾಜ್ಯ ಚಕ್ರವರ್ತಿ | ಅ. ಅಭಿನವ ಪಂಪ |
| 2. ಸೋಮೇಶ್ವರ ಶತಕ | ಆ. ಕವಿತೆ 2006 |
| 3. ಲಲಿತಾ ಸಿದ್ದಬಸವಯ್ಯ | ಇ. ಕುಮಾರವ್ಯಾಸ |
| 4. ನಾಗಚಂದ್ರ | ಈ. ಪುರಂದರದಾಸರು |
| 5.ಜಾಲಿಯ ಮರದಂತೆ | ಉ. ಪುಲಿಗೆರೆ ಸೋಮನಾಥ |
| | ಊ. ದ .ರಾ.. ಬೇಂದ್ರೆ |

ಆ ----ವಿಭಾಗ

ಅ ಯಾವುದಾದರೂ ಮುರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ :- 3×2=6

17. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?
18. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು ?
19. ಹಡೆದ ತಂದೆ -ತಾಯಿಯರ ಮಹತ್ವ ತಿಳಿಸಿರಿ?
20. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

**ಆ . ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ :-** **2×2=4**

21. ಡಾ. ಚಂದ್ರಪ್ಪ ಬಸಲಿಂಗನಿಗೆ ಡಾ. ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?
22. ನಮ್ಮ ಸಾರ್ವಜನಿಕ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
23. ಕಲಾಂರವರ ಬದುಕಿನ ಮಂತ್ರ ಯಾವುದು?
24. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂಥಹುದು?

**ಈ. ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ :-** **2×3=6**

25. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ ?
26. ಹುಚ್ಚು ನಾಯಿಗಳು ಆಸ್ಪತ್ರೆಯಲ್ಲಿ ಹೀಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು ?
27. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?
28. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹಿರಾತು ನೀಡಿದರು?

**ಇ -ವಿಭಾಗ**

**ಅ. ಯಾವುದಾದರೂ ಎರಡು ವಾಕ್ಯಗಳ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ :-** **2×3=6**

29. ನೀ ತಂಪ ನನ್ನ ತವರೀಗಿ
30. ಮರಣ ಬಂದೀತು ಕ್ಷಣವು ಉರುಳಿ
31. ದಿನನಿತ್ಯ ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ

**ಆ . ಯಾವುದಾದರೂ ಒಂದು ವಾಕ್ಯದ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:-** 3×1=3

32. ಆ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ
33. ನೋಡು , ನಿನ್ನ ಎದುರು ಎರಡು ಆಯ್ಕೆಗಳಿವೆ
34. ಸೀತಾಪಹರಣ ಕಥನದೊಳ್ ಬಯಕೆಯೆ

**ಇ . ಯಾವುದಾದರೂ ಒಂದು ವಾಕ್ಯದ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ :-** 3×1=3

35. ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲ .
36. ಆನೆ ಬೇಲಿ ದಾಟಿ ಹೋಯ್ತು ಸಾರ್.

ಈ -ವಿಭಾಗ

**ಅ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:-** 4×2=8

37. ರಾವಣನಲ್ಲಿ ಕಂಡು ಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?
38. ಬಸವಣ್ಣನವರ ಪ್ರಕಾರ ನೈಜ ಭಕ್ತಿಯ ಲಕ್ಷಣಗಳಾವುವು?
39. ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ-ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

40. ಶಾಲೆ ಕಾಲೇಜುಗಳು ಕಲಿಸಿದ್ದು ದಾರಿ ಬದಿ
    ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು
    ರೇಡಿಯೋ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದು,
    ನೀನಾಗಿ ಕಲಿತಿದ್ದು ಬಲು ಕಡಿಮೆ ,ಬಸ್ ಸ್ಟಾಪಿನಲ್ಲಿ ನಿಂತ
    ಬಣ್ಣಗಳ ಕಡೆಗೆ ಕಣ್ಣಾಡಿಸುವುದೊಂದನ್ನು ಹೊರತು

    1. ಮಕ್ಕಳು ಕಲಿತಿದ್ದು ಎಲ್ಲಿಂದ? 1 ಅಂಕ
    2. ಮಕ್ಕಳಿಗೆ ನೆರವಾದ ಮಾಧ್ಯಮ ಯಾವುದು? 1 ಅಂಕ
    3. ಮಕ್ಕಳು ಸ್ವತಃ ಕಲಿತದ್ದು ಏನನ್ನು ? 2 ಅಂಕ

**ಆ.ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:-** 4×1=4

41. ಅಂತರಾಷ್ಟ್ರೀಯ ವಿದ್ಯಮಾನಗಳಿಂದ ವಾಲ್ಪರೈಗೆ ಒದಗಿದ ಸಮಸ್ಯೆಗಳೇನು?
42. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ?ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

**ಇ.ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:-** 4×1=4

43. ಟೆಲಿಫೋನ್ ಲೈನ್ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.
44. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

**ಉ-ವಿಭಾಗ**

**ಭಾಷಾಭ್ಯಾಸ**

**ಅ. ಇವುಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ:-** 4×2=8

45. ಕೆಳಗಿನ ಎರಡು ಪದಗಳ ಅರ್ಥ ಬರೆಯಿರಿ:-

    ಮೂಡಲ ಕೂಳು ಮಾಹೆ

46. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಸೂಚಿಸಿ:-

    ಕಲಿಭೀಮ ಘೋರಪಾತಕಿ ಹೆಮ್ಮರ

47. ಕೆಳಗಿನ ಎರಡು ಪದಗಳಿಗೆ ವಿಭಕ್ತಿ ಪ್ರತ್ಯಯ ಬರೆಯಿರಿ:-

ಕದಡಿದ ಗುರುವಿಗೆ ಧುರದೊಳ್

48. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ

48. ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :-

ಕಾಲು ಕೀಳು ಎರಡುಬಗೆ ತಲೆಬಾಗು

49. ಕೆಳಗಿನ ಎರಡು ಪದಗಳ ಕಾಲವನ್ನು ಸೂಚಿಸಿ :-

ಕೇಳುತ್ತಾರೆ ಕುಣಿಯುವರು ಹೋದನು

50. ಆ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :- 1×4=4

ತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಮಸ್ಯೆ

ಅಥವಾ

ರಕ್ತದಾನ ಮತ್ತು ನೇತ್ರದಾನಗಳ ಮಹತ್ವ

ಇ . ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ :- 1×4=4

51. ದೀಪಕ್/ಮೀನಾ ದ್ವಿತೀಯ ಪಿಯುಸಿ ಮಿತ್ರಾಲಯ ಪದವಿ ಪೂರ್ವ ಕಾಲೇಜು , ಕೆ.ಆರ್ ಪುರಂ , ಬೆಂಗಳೂರು ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಸ್ಮೃತಿ ಕಾರಂತ್, ದಕ್ಷಿಣ ಕನ್ನಡ , ಉಡುಪಿಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಾಯಿಯವರಿಗೆ ನಿಮ್ಮ ಕಾಲೇಜಿನ ಸಾಂಸ್ಕೃತಿಕ ಉತ್ಸವವನ್ನು ಕುರಿತು ಒಂದು ಪತ್ರ ಬರೆಯಿರಿ .

ಅಥವಾ

ಗಿರೀಶ್ /ಗೀತಾ ದ್ವಿತೀಯ ಪಿಯುಸಿ ಫಿಲೋಮಿನಾ ಪದವಿ ಪೂರ್ವ ಕಾಲೇಜು ಬಾದಾಮಿ , ಬಾಗಲಕೋಟೆ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ಕೋರಿ ಪತ್ರ ಬರೆಯಿರಿ.

***********